# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.97-2012** **ಡಿ . ಡಬ್ಲುಃ 2**

| | |
|---|---|
| ಸಾಕ್ಷಿದಾರರ ಹೆಸರು | ಇಬ್ರಾಹಿಂ |
| ವಾಸ್ತವ್ಯ | ಹೆಡಿಯಾಲ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 28-02-2024.** |

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ.ಎಂ ವಕೀಲರಿಂದಃ**

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನಾನು ಹುಟ್ಟಿದ್ದು ಹೊಸವೀಡಿನಲ್ಲಿ, ಆದರೆ ನಾನು ಬೆಳೆದಿದ್ದೆಲ್ಲಾ ಹೆಡಿಯಾಲ ಗ್ರಾಮದಲ್ಲಿ. ನನಗೆ ದಾವಾ ಸರ್ವೇ ನಂಬರ್ ಹೇಳಲು ಆಗುವುದಿಲ್ಲ. ದಾವಾ ಷೆಡ್ಯೂಲ್ ಸ್ವತ್ತಿನ ಒಟ್ಟು ವಿಸ್ತೀರ್ಣ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಆದರೆ ನಮಗೆ 4 ಗುಂಟೆ ಸ್ವತ್ತು ಕ್ರಯವಾಗಿರುತ್ತದೆ ದಾವಾ ಸರ್ವೇ ನಂಬರ್ 119 ರ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ಆದರೆ 1969 ರಲ್ಲಿ ನನ್ನ ತಂದೆಯವರು 4 ಗುಂಟೆ ಸ್ವತ್ತನ್ನು ಕ್ರಯಕ್ಕೆ ಪಡೆದಿರುತ್ತಾರೆ ನಾನು ಸದರಿ ಸ್ವತ್ತನ್ನು ನೋಡಿದ್ದು, ನಾನು ಅದೇ ಸ್ವತ್ತಿನಲ್ಲಿ ವಾಸವಿದ್ದು ಸ್ವಾಧೀನಾನುಭದಲ್ಲಿ ಇರುತ್ತೇನೆ. ವಾದಿ ಹುಚ್ಚೇಗೌಡರು ಸಹ ಹೆಡಿಯಾಲ ಗ್ರಾಮದವರೇ ಆಗಿದ್ದು, ಆದರೆ ಅವರು ನನಗೆ ಹೆಚ್ಚಾಗಿ ಪರಿಚಯ ಇರುವುದಿಲ್ಲ. ನನಗೆ ವಾದಿಯ ತಂದೆ-ತಾಯಿ ಹೆಸರು ಗೊತ್ತಿಲ್ಲ. ನಾನು ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸರ್ವೇ ನಂ.119 ರ ಒಟ್ಟು ವಿಸ್ತೀರ್ಣ 12 ಗುಂಟೆ ಇತ್ತು ಎಂದರೆ ಸರಿ. ರ್ವೇ ನಂ.119 ರ ಒಟ್ಟು ವಿಸ್ತೀರ್ಣ 12 ಗುಂಟೆ ಸ್ವತ್ತನ್ನು ವಾದಿಯ ಅಜ್ಜಿ ದೇವಿರಮ್ಮನವರು ದಿ.13-12-1954 ರಂದು ನಿಂಗಪ್ಪ ಎಂಬುವವರಿಂದ ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ದೇವಿರಮ್ಮನವರ

ಮರಣಾನಂತರ ದಾವಾ ಷೆಡ್ಯೂಲ್ ಸ್ವತ್ತಿನ ಖಾತೆಯೂ ವಾದಿ ಮತ್ತು ಅವರ ತಾಯಿಯವರ ಹೆಸರಿನಲ್ಲಿ ಬದಲಾವಣೆ ಆಗಿರುತ್ತದೆ ಎಂದರೆ ಗೊತ್ತಿಲ್ಲ. ನಾನು ಹೇಳುವಂತೆ ಸರ್ವೇ ನಂ.119 ರಲ್ಲಿ 4 ಗುಂಟೆ ವಿಸ್ತೀರ್ಣದ ಸ್ವತ್ತನ್ನು ನನ್ನ ತಂದೆಯವರು ಯಾರಿಂದ ಖರಿದಿ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯವರು ವಾದಿ ಮತ್ತು ಅವರ ತಾಯಿಯಿಂದ 4 ಗುಂಟೆ ಸ್ವತ್ತನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹುಚ್ಚೇಗೌಡ ಎಂದರೆ ವಾದಿ ಅಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯವರು ವಾದಿ ಮತ್ತು ಅವರ ತಾಯಿಯಿಂದ ಸ್ವತ್ತನ್ನು ಖರೀದಿ ಮಾಡಿರುವ ವಿಚಾರ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂ.119 ರ ಒಟ್ಟು ವಿಸ್ತೀರ್ಣದ ಪೈಕಿ 4 ಗುಂಟೆ ಜಮೀನು ರಸ್ತೆಗೆ ಒತ್ತುವರಿ ಆಗಿದ್ದು, 4 ಗುಂಟೆ ಸ್ವತ್ತಿನಲ್ಲಿ ನೀವು ಸ್ವಾಧೀನದಲ್ಲಿ ಇದ್ದು, ಉಳಿದ 4 ಗುಂಟೆ ಸ್ವತ್ತಿನಲ್ಲಿ ವಾದಿಯರು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸರ್ವೇ ನಂ.119 ರ ಒಟ್ಟು ವಿಸ್ತೀರ್ಣ 12 ಗುಂಟೆ ಪೈಕಿ 8 ಗುಂಟೆ ಸ್ವತ್ತು ರಸ್ತೆಗಾಗಿ ಭೂ ಸ್ವಾಧೀನವಾಗಿದ್ದು, ಉಳಿದ 4 ಗುಂಟೆ ಸ್ವತ್ತಿನಲ್ಲಿ ನಾವು ಸ್ವಾಧೀನದಲ್ಲಿ ಇರುತ್ತೇವೆ ಎಂದು ನುಡಿಯುತ್ತಾರೆ. ಸರ್ವೇ ನಂ.119 ರ ಒಟ್ಟು ವಿಸ್ತೀರ್ಣ 12 ಗುಂಟೆ ಪೈಕಿ 8 ಗುಂಟೆ ಸ್ವತ್ತು ರಸ್ತೆಗಾಗಿ ಭೂ ಸ್ವಾಧೀನವಾಗಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನೋಡಿರುವುದಿಲ್ಲ ಮತ್ತು ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಹೇಳುವಂತೆ 8 ಗುಂಟೆ ಸ್ವತ್ತು ರಸ್ತೆಗಾಗಿ ಭೂ ಸ್ವಾಧೀನವಾಗದೇ ಇದ್ದರೂ ನನ್ನ ಕಲ್ಪನೆಯ ಆಧಾರದ ಮೇರೆಗೆ 8 ಗುಂಟೆ ಸ್ವಾಧೀನವಾಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೇವಲ 4 ಗುಂಟೆ ಸ್ವತ್ತು ಮಾತ್ರ ರಸ್ತೆ ಭೂ ಸ್ವಾಧೀನವಾಗಿರುತ್ತದೆ ಎಂದರೆ ಸರಿಯಲ್ಲ

2. ದಾವಾ ಷೆಡ್ಯೂಲ್ ಸ್ವತ್ತಿನ ಪೂರ್ವಕ್ಕೆ:-ಶಿವಪ್ಪನವರ ಮನೆ, ಪಶ್ಚಿಮಕ್ಕೆ:- ಜಬ್ಬಾರ್ ಸಾಹೇಬ್ ರವರ ಮನೆ, ಉತ್ತರಕ್ಕೆ:-ಬಸವರಾಜಪ್ಪನವರ ಖಾಲಿ ಜಾಗ

ಹಾಗೂ ದಕ್ಷಿಣಕ್ಕೆ:–ಪಿ.ಡಬ್ಲೂಡಿ ರಸ್ತೆ ಇರುತ್ತದೆ. ನನ್ನ ತಂದೆಗೆ ಕ್ರಯ ಪತ್ರ ಬರೆದುಕೊಟ್ಟ ಹುಚ್ಚೇಗೌಡ ಮತ್ತು ಸಿದ್ದಮ್ಮನವರನ್ನು ಹೆಡಿಯಾಲ ಗ್ರಾಮದವರಾಗಿದ್ದು ಅವರನ್ನು ನಾನು ನೋಡಿರುವುದಿಲ್ಲ ಹಾಗೂ ಅವರು ಯಾರೆಂದು ತಿಳಿದುಕೊಳ್ಳಲು ನಾನು ಪ್ರಯತ್ನ ಪಟ್ಟಿರುವುದಿಲ್ಲ, ನನ್ನ ತಂದೆಯವರ ಮರಣಾನಂತರ ಅವರು ಖರೀದಿ ಮಾಡಿದ್ದ ಸ್ವತ್ತಿನ ಖಾತೆಯೂ ನನ್ನ ಹೆಸರಿಗೆ ಬದಲಾವಣೆ ಆಗಿರುತ್ತದೆ. ವಾದಿ ಮತ್ತು ಅವರ ತಾಯಿಯವರೇ ನನ್ನ ತಾಯಿಯರಿಗೆ ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ತಿಪ್ಪೆಗುಂಡಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿ ಷೆಡ್ಯೂಲ್ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಷೆಡ್ಯೂಲ್ ಸ್ವತ್ತಿನಲ್ಲಿ ತಿಪ್ಪೆ ಗುಂಡಿ ಇದ್ದರು ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಷೆಡ್ಯೂಲ್ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇಲ್ಲದೇ ಇದ್ದರೂ ಸಹ 1 ನೇ ಪ್ರತಿವಾದಿ ಮತ್ತು ಬಸವರಾಜಪ್ಪನವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**